**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 17.11-2025:**

**ಮುಂದುವರೆದ ಮುಖ್ಯ ವಿಚಾರಣೆಃ**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಅಡಿಷನಲ್ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ವಿಷಯಗಳನ್ನು ನಾನೇ ಬರೆಸಿದ್ದು ಸದರಿ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಪ್ರಮಾಣಪತ್ರದಲ್ಲಿ ನಾನು ನನ್ನ ಸಹಿ ಮಾಡಿರುತ್ತೇನೆ.

**ಪಾಟೀಸವಾಲುಃ ಎದುರುದಾರರ ಪರ ವಕೀಲರಿಂದಃ**

19-12-2019ರಂದು ಪರಿಹಾರದ ಹಣವನ್ನು ಪಡೆದುಕೊಂಡ ನಂತರದ ಮೂರು ವರ್ಷದಒಳಗಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಕೋವಿಡ್ ಬಂದಿತ್ತು ಮತ್ತು ಅಧಿಕಾರಿಗಳು ತಾವೇ ಹೆಚ್ಚಿನ ಹಣ ಕೊಡುವುದಾಗಿ ಹೇಳಿದ್ದರು ಎನ್ನುತ್ತಾರೆ. ಆ ಬಗ್ಗೆ ಅವರು ನನಗೆ ಹಿಂಬರಹ ಕೊಟ್ಟಿಲ್ಲ. ಕಾಲಮಿತಿ 2022-23ರಲ್ಲಿ ಮುಗಿದಿರುತ್ತದೆ. ಕಾಲಮಿತಿ ಮುಗಿದ ನಂತರವೂ ಸಕಾಲದಲ್ಲಿ ಅರ್ಜಿ ಹಾಕಿಲ್ಲ ಎಂದರೆ ಸರಿಯಲ್ಲ. ಕೋವಿಡ್ ಅವದಿಧ ಮುಗಿದ ನಂತರವೂ ಕಾಲಮಿತಿ ಅರ್ಜಿ ಹಾಕಲು ಸಮಯ ಇತ್ತು ಎಂದರೆ ಸಾಕ್ಷಿಯು ಅಧಿಕಾರಿಗಳು ಹೆಚ್ಚಿನ ಹಣ ಕೊಡುವುದಾಗಿ ಹೇಳಿದ್ದರಿಂದ ಹಾಕಲಿಲ್ಲ ಎನ್ನುತ್ತಾರೆ ನನಗೆ ಹುಷಾರಿರಲಿಲ್ಲ ಎನ್ನುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎನ್ನುವುದು ನಿಜ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**